# ಕರ್ನಾಟಕ ವಿಧಾನಪರಿಷತ್ತು

## ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

## **ಚುಕ್ಕೆ ಗುರುತಿನ ಪ್ರಶ್ನೆ**

ದಿನಾಂಕ : 15-03-2021 ಪ್ರಶ್ನೆ ಸಂಖ್ಯೆ : 169(1081)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀಮತಿ ಭಾರತಿ ಶೆಟ್ಟಿ(ನಾಮನಿರ್ದೇಶನ ಹೊಂದಿದವರು)

ಉತ್ತರ ನೀಡಬೇಕಾದ ದಿನಾಂಕ : 15-03-2021

ಉತ್ತರಿಸುವ ಸಚಿವರು: ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು

ವಿಷಯ : ಪೂರ್ವ ಪ್ರಾಥಮಿಕ ಮತ್ತು ಪ್ರಾಥಮಿಕ ಶಿಕ್ಷಣದ ಗುರಿಗಳ ಬಗ್ಗೆ

(ಅ) ಪೂರ್ವ ಪ್ರಾಥಮಿಕ ಮತ್ತು ಪ್ರಾಥಮಿಕ ಶಿಕ್ಷಣದ ಗುರಿಗಳೇನು;

(ಆ) ಸದರಿ ಶಿಕ್ಷಣದ ವ್ಯವಸ್ಥೆಯಿಂದ ಸ್ವಸ್ಥ ಸಮಾಜ ರೂಪಿಸುವಲ್ಲಿ ಕಂಡು ಬಂದಿರುವ ಕೊರತೆಗಳೇನು;

(ಇ) ಈ ಕೊರತೆಗಳನ್ನು ಸರಿಪಡಿಸಲು ಶಿಕ್ಷಣ ಇಲಾಖೆಯು ಸಮಾಜದ ಯಾವ ಯಾವ ಅಂಗಗಳಿಂದ ಯಾವ ರೀತಿಯ ಕ್ರಮಗಳನ್ನು ಬಯಸುತ್ತದೆ;

(ಈ) ಇವುಗಳನ್ನು ಸಾಧಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

(ಉ) ಭಾರತದ ಶೈಕ್ಷಣಿಕ ಪರಮವೈಭವದ ಸ್ಥಿತಿಯನ್ನು ಮತ್ತೊಮ್ಮೆ ಕಾಣುವಂತಾಗಲು ಸರ್ಕಾರದ ಪ್ರಯತ್ನಗಳೇನು;

(ಊ) ದೈನಂದಿನ ಆಡಳಿತಾತ್ಮಕ ಸಮಸ್ಯೆಗಳನ್ನು ಬಗೆಹರಿಸುವುದರೊಂದಿಗೆ ಮೂಲ ಶಿಕ್ಷಣದ ಗುರಿಗಳ ಸಾಧನೆಗೆ ಸರ್ಕಾರ ಸಮಯ ನಿಗಧಿಪಡಿಸಿಕೊಂಡಿದೆಯೇ?